

**ಭಾಷಾ ಕಲಿಕಾ ಮಟ್ಟವನ್ನು ಸುಧಾರಿಸುವಲ್ಲಿ ತರಗತಿಯ ಜೋಡಿ ಕೆಲಸ ಮತ್ತು ಗುಂಪು ಚಟುವಟಿಕೆಗಳ ಪಾತ್ರ**

**ಪೀಠಿಕೆ:-**

ಮಗು ಭಾಷೆಯನ್ನು ಹೇಗೆ ಕಲಿಯುತ್ತದೆ ಎಂದು ನೋಡಿದಾಗ ಬಹುತೇಕ ಸಂಶೋಧನೆಗಳು ನಮಗೆ ತಿಳಿಸುವುದೇನೆಂದರೆ, ಮಗು ತನ್ನ ಅನುಭವಗಳಿಂದ, ತನ್ನ ಸುತ್ತಲ ಪರಿಸರವನ್ನು ಗಮನಿಸುವ ಮೂಲಕ, ತನ್ನ ಒಡನಾಡಿಗಳೊಂದಿಗೆ ಆಟದ ಮೂಲಕ, ತನ್ನ ಗೊಂದಲ ಬಗೆಹರಿಸಿಕೊಳ್ಳಲು ಪ್ರಶ್ನೆಗಳನ್ನು ಕೇಳುವ ಮೂಲಕ ವಿಷಯಗಳನ್ನು ಸಂಗ್ರಹಿಸುತ್ತಾ, ಸಂಗ್ರಹಿಸಿದ ವಿಷಯಗಳನ್ನು ಪುನರ್ ಅವಲೋಕಿಸುತ್ತಾ, ಅವಲೋಕಿಸಿದ್ದನ್ನು ಲಭ್ಯವಿರುವ ಆಧಾರಗಳ ಮೇಲೆ ತಾರ್ಕಿಕವಾಗಿ ವಿಮರ್ಶಿಸುತ್ತಾ ಭಾಷಾ ಕೌಶಲಗಳನ್ನು ವೃಧ್ಧಿಸಿಕೊಳ್ಳುತ್ತದೆ ಮತ್ತು ಇದರೊಟ್ಟಿಗೆ ಪದ ಸಂಪತ್ತಿನ ಬಳಕೆ, ವಾಕ್ಯ ಸರಣಿಗಳ ಬಳಕೆಯ ಕ್ಲಿಷ್ಟತಮ ಮಟ್ಟವನ್ನು ತಲುಪುತ್ತದೆ. ಆದುದರಿಂದ ಶಿಕ್ಷಕರು ಮತ್ತು ಪೋಷಕರು ಮಕ್ಕಳಿಗೆ ಇಂತಹ ಗರಿಷ್ಠ ಅವಕಾಶಗಳನ್ನು ನೀಡುವುದರ ಮೂಲಕ ಅವರ ಜ್ಞಾನಾತ್ಮಕ ಮತ್ತು ಸಾಮಾಜಿಕ ಕೌಶಲಗಳ ಬೆಳವಣಿಗೆಗೆ ಅವಕಾಶ ನೀಡಬೇಕಾಗುತ್ತದೆ.

**ಕಲಿಕೆ ಮತ್ತು ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು 2005:-**

ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು 2005 ಮಕ್ಕಳ ಶಿಕ್ಷಣದ ಕುರಿತು ವಿಶೇಷವಾಗಿ ಗಮನ ಹರಿಸಿದೆ. ಕಲಿಕೆ ಎಂಬುದು ಕೇವಲ ನಾಲ್ಕು ಗೋಡೆಗಳ ನಡುವಿನ À ಪ್ರಕ್ರಿಯೆಯಲ್ಲ. ಬದಲಾಗಿ ತರಗತಿಯಾಚೆ ತಮ್ಮ ಅನುಭವಗಳನ್ನು ಕ್ರೋಢೀಕರಿಸಿ ಜ್ಞಾನವನ್ನು ಕಟ್ಟಿಕೊಳ್ಳುವ ನಿರಂತರ ಪ್ರಕ್ರಿಯೆ ಎಂದು ಹೇಳಿದೆ. ಶಿಕ್ಷಕ ತನ್ನ ಜ್ಞಾನ ಸಂಪತ್ತನ್ನು ವಿದ್ಯಾರ್ಥಿಯ ತಲೆಯ ಒಳಗೆ ತುರುಕುವ ಯಂತ್ರವಲ್ಲ; ಬದಲಾಗಿ ಮಗು ತನ್ನ ಜ್ಞಾನವನ್ನು ತಾನೇ ಸ್ವತಃ ಕಟ್ಟಿಕೊಳ್ಳುವ ಸಾಮರ್ಥ್ಯವನ್ನು ಹೊಂದಿದೆ ಎಂದು ಹೇಳಿದೆ. ಈ ಅಂಶಗಳನ್ನು ನೋಡಿದಾಗ ಪ್ರತಿಯೊಂದು ಮಗುವೂ ತಾನೇ ಸ್ವತಃ ಕಲಿಯುವ ಸಾಮರ್ಥ್ಯ ಹೊಂದಿದೆ ಎಂದು ತಿಳಿಯುತ್ತದೆ. ಹಾಗಾದರೆ ಮಗು ತಾನೇ ಸ್ವತಃ ಕಲಿಯಲು ಅನುವು ಮಾಡಿಕೊಡುವುದು ಹೇಗೆ ಎಂದು ನೋಡಿದಾಗ, ಅವರು ಸ್ವತಃ ಅನುಭವಗಳ ಮೂಲಕ ತಾವು ಗಳಿಸಿದ ಜ್ಞಾನವನ್ನು ಹಂಚಿಕೊಳ್ಳಲು ಅವಕಾಶ ಮಾಡಿಕೊಡುವುದು ಸೂಕ್ತ ಎಂದೆನಿಸುತ್ತದೆ. ಈ ಕಾರಣಕ್ಕಾಗಿ ನಾವು ತರಗತಿಯಲ್ಲಿ ಜೋಡಿಕೆಲಸ ಮಾಡಲು ಹಾಗೂ ಗುಂಪುಗಳಲ್ಲಿ ಕೆಲಸ ಮಾಡಲು ಅವಕಾಶ ಮಾಡಿಕೊಟ್ಟರೆ ಅವರು ಪರಸ್ಪರ ತಮ್ಮ ಅನುಭವಗಳನ್ನು ಹಂಚಿಕೊಂಡು ಒಟ್ಟಾಗಿ ಬೆಳೆಯಲು ಸಹಕಾರಿಯಾಗುತ್ತದೆ.



ಸಾಮಾನ್ಯವಾಗಿ ನೋಡಿದಾಗ ಜನ ಸಮುದಾಯವು ಒಬ್ಬರ ಜೊತೆ ಇನ್ನೊಬ್ಬರು ಮಾತನಾಡುತ್ತಾ, ಬೇರೆಯವರು ಹೇಳಿದ್ದನ್ನು ಕೇಳಿಸಿಕೊಂಡು, ಬೇರೆಯವರು ಮಾಡುವುದನ್ನು ಗಮನಿಸಿ, ಬೇರೆಯವರ ವಿಚಾರಗಳಿಗೆ ಬೆಂಬಲಿಸಿ, ಸಲಹೆಗಳನ್ನು ನೀಡುತ್ತಾ, ಪರಸ್ಪರ ಸಹಾಯ ಮಾಡುತ್ತಾ ಕಾರ್ಯನಿರ್ವಹಿಸುತ್ತದೆ. ಈ ರೀತಿಯ ವಿಚಾರ ವಿನಿಮಯವು ಅವರನ್ನು ಪ್ರೋತ್ಸಾಹಿಸುವುದಲ್ಲದೆ, ತಾವು ಮಾಡುವ ಕೆಲಸವನ್ನು ವಿಭಿನ್ನ ರೀತಿಯಲ್ಲಿ ಮಾಡಲು, ಅವಕಾಶ ಮಾಡಿಕೊಡುತ್ತದೆ. ಆದುದರಿಂದ ತರಗತಿ ಪ್ರಕ್ರಿಯೆಯಲ್ಲಿ ಈ

ವಿಧಾನವನ್ನು ಬಳಸಿದರೆ ವಿದ್ಯಾರ್ಥಿಗಳಿಗೆ ಅನ್ವೇಷಣೆ, ಚರ್ಚೆ, ಪ್ರಶ್ನೆಗಳನ್ನು ಕೇಳುವ ಅಭ್ಯಾಸ ಬೆಳೆಸುವ ಜೊತೆಗೆ ಸ್ವಯಂಪ್ರೇರಿತರಾಗಿ ಪರಸ್ಪರ ಸಹಕಾರದೊಂದಿಗೆ ಕಲಿಯಲು ಅವಕಾಶ ದೊರೆಯುತ್ತದೆ. ಇದಕ್ಕೆ ಉದಾಹರಣೆಯಾಗಿ ನಮ್ಮ ಜಾನಪದ ಕಲೆಗಳು ಬೆಳೆದು ಬಂದ ದಾರಿಯನ್ನು ನೋಡಬಹುದು. ನಮ್ಮ ಜಾನಪದೀಯರು ಅಕ್ಷರ ಜ್ಞಾನಿಗಳಲ್ಲ; ಆದರೆ ತಮ್ಮ ಅನುಭವಗಳ ಆಧಾರದ ಮೇಲೆ ಹಾಡುಗಳನ್ನು ಕಟ್ಟಿದ್ದಾರೆ; ಆ ಹಾಡಿನ ಮೂಲಕ ತಮ್ಮ ಅನುಭವಗಳನ್ನು ಹಂಚಿಕೊಂಡಿದ್ದಾರೆ, ('ಮೂಡಲ್ ಕುಣಿಗಲ್ ಕೆರೆ' ಹಾಡಿನಲ್ಲಿ ಕೆರೆ ವೈಭವದ ವರ್ಣನೆ ಇದೆ. 'ಗೋವಿನ ಹಾಡಿ'ನಲ್ಲಿ ಸತ್ಯಕ್ಕಾಗಿ ತನ್ನ ಪ್ರಾಣ ನೀಡಲು ಮುಂದಾದ ಗೋವಿನ ಕಥೆ ಇದೆ. 'ಮುಂಜಾನೆದ್ದು ಕುಂಬಾರಣ್ಣ' ನೋಡಿದಾಗ ಅದರಲ್ಲಿ ಕುಂಬಾರನ ಕಷ್ಟ ಸಹಿಷ್ಣುತೆಯ ಬದುಕು ಅಡಕವಾಗಿದೆ ಇವುಗಳೆಲ್ಲ ಕಥೆಗಳಾದರೂ ಇವುಗಳಲ್ಲಿ ಅವರ ಜೀವನದ ಅನುಭವಗಳು ಅಡಕಗೊಂಡಿವೆ) ಹೀಗೆ ಹಂಚಿಕೊಂಡ ವಿಷಯಗಳಿಗೆ ಇನ್ನಷ್ಟು ಸಾರವನ್ನು ಬೆರೆಸಿ ಬೆಳೆಸಿದ್ದಾರೆ. ಈ ಮೂಲಕ ಸಾಹಿತ್ಯಕ್ಕೆ ತಮ್ಮದೇ ಕೊಡುಗೆ ನೀಡಿದ್ದಾರೆ. ನನಗನಿಸುತ್ತದೆ- ಇದು ಸಾಧ್ಯವಾಗಿದ್ದು ಅವರ ಗುಂಪು ಕಾರ್ಯಗಳಿಂದ. ಜೊತೆಯಾಗಿ, ಸಹಕಾರದಿಂದ ಕಾರ್ಯನಿರ್ವಹಿಸುವ ಕೌಶಲದಿಂದ. ಇಂತಹ ಅಭ್ಯಾಸವನ್ನು ಮಕ್ಕಳಲ್ಲಿ ಬೆಳೆಸುವುದು ಅಗತ್ಯವಾಗಿದೆ. ಇದರಿಂದ ಕಲಿಕೆ ಸರಳವಾಗಬಹುದು.

**ತರಗತಿ ಪ್ರಕ್ರಿಯೆ ಮತ್ತು ಕಲಿಕೆ:-**

ಶಾಲೆಯಲ್ಲಿ ಮಗುವಿನ ಕಲಿಕೆಯು ಬರೀ ಕೇಳುವುದು ಮತ್ತು ಕೇಳಿಸಿಕೊಂಡಿದ್ದನ್ನು ಮನನ ಮಾಡಿಕೊಳ್ಳುವುದಾಗಿರದೆಜೋಡಿಯಾಗಿ ಅಥವಾ ಗುಂಪಿನಲ್ಲಿ ಹಂಚಿಕೊಂಡು ಕೆಲಸ ಮಾಡುವುದರ ಜೊತೆಗೆ ಪರಸ್ಪರರನ್ನು ಗೌರವಿಸುತ್ತಾ ತಮ್ಮ ಅನುಭವಗಳನ್ನು ಹಂಚಿಕೊಳ್ಳುತ್ತಾ, ತನಗೆ ತಿಳಿದ ವಿಷಯವನ್ನು ಮಂಡಿಸಿ ಅದರ ಕುರಿತು ಚರ್ಚಿಸುತ್ತಾ ಲಭ್ಯವಿರುವ ಮಾಹಿತಿ ಮತ್ತು ಆಧಾರಗಳ ಬೆಳಕಿನಲ್ಲಿ ಒಂದು ಅಂತಿಮ ತೀರ್ಮಾನಕ್ಕೆ ಬರುವುದಾಗಿದೆ.

ಹೀಗೆ ಮಾಡುವಾಗ ಶಿಕ್ಷಕರಿಗೆ ಎಲ್ಲಾ ಮಕ್ಕಳಿಗೆ ಮಾತನಾಡುವ ಅವಕಾಶ ಕಲ್ಪಿಸುವ ಸಂದರ್ಭದಲ್ಲಿ ಹೆಚ್ಚಿನ ಸಮಯ ಬೇಕಾಗುತ್ತದೆ. ಆದರೆ ಈ ರೀತಿ ಗುಂಪು ಮತ್ತು ಜೋಡಿಕಾರ್ಯ ನೀಡಿದಾಗ ಕಡಿಮೆ ಸಮಯದಲ್ಲಿ ಹೆಚ್ಚಿನ ಮಕ್ಕಳಿಗೆ ಅವಕಾಶ ಕೊಟ್ಟಂತಾಗುತ್ತದೆ. ಜೊತೆಗೆ ತರಗತಿಯಲ್ಲಿನ ವಿಭಿನ್ನ ಕಲಿಕಾ ಮಟ್ಟದ ಮಕ್ಕಳಿಗೆ ಕಲಿಕೆಯ ಸಮಾನ ವೇದಿಕೆ ಕಲ್ಪಿಸಿದಂತಾಗುತ್ತದೆ ಮತ್ತು ಮಕ್ಕಳ ಅಗತ್ಯಕ್ಕನುಸಾರ ಗುಂಪುಗಳನ್ನು ರಚಿಸುವ ಮೂಲಕ ತಮಗೆ ಬೇಕಾದ ಫಲಿತಾಂಶವನ್ನು ಪಡೆಯಬಹುದಾಗಿದೆ.

ಉದಾಹರಣೆಗೆ 'ಅಸ್ಪøಶ್ಯತೆ ನಮ್ಮ ಸಮಾಜಕ್ಕೆ ಮಾರಕವೋ ಅಥವಾ ಪೂರಕವೋ?' ಎಂಬ ವಿಷಯವನ್ನು ಆಧರಿಸಿ 8ನೇ ತರಗತಿಯ ಮಕ್ಕಳು ಒಬ್ಬೊಬ್ಬರಾಗಿ ತಮ್ಮ ವಿಚಾರ ಮಂಡಿಸಲು 4 ದಿನ ತೆಗೆದುಕೊಂಡರೆ ಇದೇ ಚಟುವಟಿಕೆಯನ್ನು 5ನೇ ತರಗತಿಯ ಮಕ್ಕಳಿಗೆ ಗುಂಪಿನಲ್ಲಿ ಮಾಡಿಸಿದಾಗ ಒಂದು ದಿನ ಅವರು ತಮ್ಮ ವಿಷಯದ ಮೇಲೆ ಗುಂಪಿನಲ್ಲಿ ಚರ್ಚಿಸಿದರು. ನಂತರ ತಮ್ಮ ಗುಂಪಿನ ನಿರ್ಧಾರವನ್ನು ಬರವಣಿಗೆಯ ರೂಪಕ್ಕೆ ತಂದರು. ಎರಡನೇ ದಿನ ಅದೇ ವಿಷಯವನ್ನು ಎಲ್ಲರ ಮುಂದೆ ಪ್ರಸ್ತುತ ಪಡಿಸಿದರು. ಹೀಗೆ ಎರಡೇ ದಿನಗಳÀಲ್ಲಿ ವಿಷಯದ ಕುರಿತ ತಮ್ಮ ವಿಚಾರಗಳನ್ನು ಮಂಡಿಸಲು ಅರ್ಥಮಾಡಿಕೊಳ್ಳಲು ಸಹಾಯವಾಯಿತು. ಇದರೊಟ್ಟಿಗೆ ಅವರು ಪರಸ್ಪರರ ವಿಚಾರಗಳನ್ನು ಗೌರವಿಸಲು ಸಹಾಯವಾಯಿತು. ಆದರೆ 4 ದಿನ ಚರ್ಚೆ ಮತ್ತು ಮಂಡನೆಯ ನಂತರವೂ 8ನೇ ತರಗತಿಯಲ್ಲಿ ಕೆಲವು ವಿಷಯಗಳ ಮೇಲೆ ಒಮ್ಮತದ ತೀರ್ಮಾನ ತೆಗೆದುಕೊಳ್ಳಲು ಸಾಧ್ಯವಾಗಲಿಲ್ಲ. ಈ ರೀತಿಯ ಗುಂಪು ಅಥವಾ ಜೋಡಿ ಕಾರ್ಯದ ಮೂಲಕ ಹಾಗೂ ಬೇರೆ ಬೇರೆ ಕಲಿಕಾ ಮಟ್ಟದಲ್ಲಿರುವವರನ್ನು ಗುಂಪಿನಲ್ಲಿ ಸೇರಿಸುವ ಮೂಲಕ ಅವರ ಸಾಮರ್ಥ್ಯಾನುಸಾರ ಗುಂಪಿನ ಸಾಧನೆಗೆ ಕಾಣಿಕೆಯನ್ನು ಪಡೆಯಬಹುದು. ಆಗ ಆ ಗುಂಪಿನ ಸಾಧನೆ ಒಬ್ಬ ವ್ಯಕ್ತಿಯ ಸಾಧನೆಯಾಗಿರದೆ ಇಡೀ ಗುಂಪಿನ ಸಾಧನೆಯಾಗಿರುವುದರಿಂದ ಎಲ್ಲರೂ ಇದನ್ನು ಗೌರವಿಸುತ್ತಾರೆ ಅಲ್ಲದೆ ಗುಂಪಿನ ಸಾಧನೆಗಾಗಿ ಎಲ್ಲಾ ಮಕ್ಕಳು ಸಹ ಸೇರಿ ಪರಸ್ಪರ ಸಹಾಯ ಮಾಡುವ ಮೂಲಕ ತಂಡದ ಯಶಸ್ಸಿಗೆ

ಕಾರಣರಾಗುತ್ತಾರೆ. ಇದರಿಂದಾಗಿ ಕಲಿಕೆಯಲ್ಲಿ ನಿಧಾನಗತಿಯ ಮಕ್ಕಳಿಗೂ ಇತರೇ ಮಕ್ಕಳಿಗೂ ಸಹಾಯ ದೊರೆಯುತ್ತದೆ. ಆದುದರಿಂದ ಗುಂಪು ಕಾರ್ಯವು ಸಹಕಾರಯುತ ಕಲಿಕೆಗೆ ದಾರಿದೀಪವಾಗಿದೆ ಎನಿಸುತ್ತದೆ.

ಪ್ರಸ್ತುತ ನಮ್ಮ ತರಗತಿಗಳನ್ನು ನೋಡಿದಾಗ ತರಗತಿಯಲ್ಲಿ ಮಕ್ಕಳ ಕಲಿಕಾ ಮಟ್ಟದಲ್ಲಿ ತುಂಬಾ ಅಂತರವಿದೆ. ಈ ಅಂತರಕ್ಕೆ ಕಾರಣಗಳನ್ನು ಹುಡುಕುತ್ತಾ ಹೋದಾಗ ನಮ್ಮ ಗಮನಕ್ಕೆ ಬಂದಿದ್ದು, ಕಲಿಯುವ ಮಕ್ಕಳು ಕಲಿಯುತ್ತಾ ಮುಂದೆ ಮುಂದೆ ಹೋಗುತ್ತಾರೆ ಆದರೆ ತರಗತಿಯ ಕಲಿಕಾ ಹಂತದಲ್ಲಿ ಹಿಂದುಳಿದ ಮಕ್ಕಳು ಅಲ್ಲಿಯೇ ಉಳಿಯುತ್ತಾರೆ ಮತ್ತು ಕಲಿಕೆಯಲ್ಲಿ ಆಸಕ್ತಿಯನ್ನು ಕಳೆದುಕೊಳ್ಳುತ್ತಾರೆ. ಇದಕ್ಕೆ ಮೂಲ ಕಾರಣವೂ ಸಹ ಮಕ್ಕಳೇ ಆಗಿರುತ್ತಾರೆ ಏಕೆಂದರೆ ಮುಂದೆ ಸಾಗುವ ಮಕ್ಕಳು ಹಿಂದುಳಿದ ಮಕ್ಕಳನ್ನು ಟೀಕಿಸುತ್ತಾ ಅವರ ಮನೋಸ್ಥೈರ್ಯವನ್ನು ಹಾಳು ಮಾಡುತ್ತಾರೆ. ಅದರ ಬದಲಾಗಿ ಗುಂಪು ಕಾರ್ಯಗಳನ್ನು ನೀಡಿದಾಗ ತಂಡದ ಸಫಲತೆಗಾಗಿ ಪರಸ್ಪರ ಟೀಕಿಸುವ ಬದಲಾಗಿ ಪ್ರತಿಯೊಬ್ಬರೂ ಸಹಕಾರದಿಂದ ಕಾರ್ಯನಿರ್ವಹಿಸಬೇಕಾಗುತ್ತದೆ. ಉದಾಹರಣೆಗೆ ಒಂದು ನಾಟಕದ ಅಭಿನಯವನ್ನು ಗುಂಪಿಗೆ ನೀಡಿ ನೀವು ಅಭಿನಯಿಸಬೇಕು ಎಂದು ಹೇಳಿದರೆ ಪ್ರತಿಯೊಬ್ಬರೂ ಪರಸ್ಪರ ಸಹಕಾರದಿಂದ ನೀಡಿರುವ ಸಂಭಾಷಣೆಯನ್ನು ಓದಿ ಅರ್ಥಮಾಡಿಕೊಂಡು ನಟಿಸುತ್ತಾರೆ. ಅಂತಿಮವಾಗಿ ಕಲಿಕೆಯಲ್ಲಿ ಹಿಂದುಳಿದ ಮಗುವಿಗೂ ಸಹ ಸಹಾಯ ನೀಡುವ ಮೂಲಕ ಕಲಿಯಲು ಅವಕಾಶ ಕಲ್ಪಿಸುತ್ತಾರೆ. ಇದರಿಂದ ಗುಂಪಿನಲ್ಲಿ ಓದುಗಾರಿಕೆಯೂ ಸರಳವಾಗುತ್ತದೆ. ಒಂದು ಕಥೆಯನ್ನು ನೀಡಿ ಗುಂಪಿನ ಎಲ್ಲಾ ಸದಸ್ಯರು ಒಂದೊಂದು ಪರಿಚ್ಛೇದವನ್ನು ಓದುತ್ತಾ ವಿವರಿಸಬೇಕು ಎಂದು ಹೇಳಿದರೆ ಅದರ ಅಭ್ಯಾಸವನ್ನು ಗುಂಪಿನಲ್ಲಿ ಸರಿಯಾಗಿ ಮಾಡುತ್ತಾರೆ. ಆದುದರಿಂದ ಮಕ್ಕಳ ಭಾಷಾ ಕಲಿಕೆಯ ಸಮಸ್ಯೆಯನ್ನು ನಿವಾರಿಸಿ ಕಲಿಕಾ ಮಟ್ಟವನ್ನು ಸುಧಾರಿಸಲು ಜೋಡಿ ಮತ್ತು ಗುಂಪು ಕಾರ್ಯಗಳು ಸಹಕಾರಿಯಾಗಿವೆ.



ಹೀಗೆ ಮಕ್ಕಳು ಗುಂಪಿನಲ್ಲಿ ಕಲಿಯುತ್ತಾರೆ ಎಂಬ ಅಂಶವನ್ನು ಗಮನದಲ್ಲಿಟ್ಟುಕೊಂಡು ಕೆಳಗಿನ ಉದ್ದೇಶಗಳ ಆಧಾರದ ಮೇಲೆ ಕಾರ್ಯನಿರ್ವಹಿಸಲಾಯಿತು.

**ಉದ್ದೇಶ**:-

ಈ ಪ್ರಬಂಧವನ್ನು ಬರೆಯುವ ಪ್ರಮುಖ ಉದ್ದೇಶಗಳೆಂದರೆ:

- ಗುಂಪು ಮತ್ತು ಜೋಡಿ ಕಾರ್ಯದ ಮೂಲಕ ಎಲ್ಲಾ ಮಕ್ಕಳು ಭಾಷಾ ಕಲಿಕೆಯಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳುವಂತೆ ಮಾಡಬಹುದಾದ ಕೆಲವು ಚಟುವಟಿಕೆಗಳ ಬಗ್ಗೆ ತಿಳಿಯುವುದು.
- ಸಂತಸದಾಯಕ ಮತ್ತು ಸಹಕಾರಯುತ ಕಲಿಕೆಯಲ್ಲಿ ಜೋಡಿ ಮತ್ತು ಗುಂಪು ಕಾರ್ಯದ ಪಾತ್ರವನ್ನು ತಿಳಿಯುವುದು.

- ಮಕ್ಕಳ ಭಾಷೆ ಮತ್ತು ಕಲಿಕಾ ಮಟ್ಟದ ಸುಧಾರಣೆಗಾಗಿ ಗುಂಪು ಮತ್ತು ಜೋಡಿ ಕೆಲಸವನ್ನು ಮೌಲ್ಯಮಾಪನವಾಗಿ ಬಳಸಬಹುದಾದ ವಿಧಾನದ ಕುರಿತು ತಿಳಿಯುವುದು.

**ಲೇಖನದ ವ್ಯಾಪ್ತಿ:-**

ಈ ಲೇಖನದ ವಿಷಯ ವ್ಯಾಪ್ತಿಯು ಪ್ರಮುಖವಾಗಿ ಅಜೀಂ ಪ್ರೇಮ್‌ಜೀ ಶಾಲೆಯ 5ನೇ ತರಗತಿ ಮಕ್ಕಳ ಕಲಿಕಾ ಮಟ್ಟ ಸುಧಾರಣೆಯಲ್ಲಿ ಜೋಡಿ ಮತ್ತು ಗುಂಪು ಚಟುವಟಿಕೆಗಳು ನಿರ್ವಹಿಸಿದ ಪಾತ್ರವನ್ನು ಒಳಗೊಂಡಿತ್ತು. ಈ ಚಟುವಟಿಕೆಯನ್ನು 6 ತಿಂಗಳ ಅವಧಿಗೆ ಸೀಮಿತಗೊಳಿಸಿ ಕಾರ್ಯನಿರ್ವಹಿಸಲಾಯಿತು. ಮಕ್ಕಳು ಬರೆದ ಕಥೆಗಳಲ್ಲಿನ ವಿಧಾನ ಮತ್ತು ಶೈಲಿಯಲ್ಲಿನ ಬದಲಾವಣೆಯನ್ನು ಗಮನಿಸಲಾಯಿತು. ಗುಂಪು ಕಾರ್ಯದ ಮೊದಲು ಮತ್ತು ನಂತರ ನಾಟಕ ಪ್ರದರ್ಶನದಲ್ಲಾದ ಬದಲಾವಣೆಯನ್ನು ಗಮನಿಸಲಾಯಿತು. ನಿರ್ದಿಷ್ಟ ವಿಷಯವನ್ನು ನೀಡಿ ಮಾಹಿತಿ ಸಂಗ್ರಹಿಸುವಾಗ ಒಟ್ಟಿಗೆ ಕಾರ್ಯನಿರ್ವಹಿಸಿದ ಕುರಿತು ಖಾತ್ರಿ ಮಾಡಿಕೊಳ್ಳಲಾಯಿತು. ಓದುಗಾರಿಕೆಯಲ್ಲಿ ಗುಂಪು ರಚನೆಯ ಮೊದಲು ಮತ್ತು ನಂತರ ಆದ ಬದಲಾವಣೆಗಳನ್ನು ಸಂಗ್ರಹಿಸುವ ಮೂಲಕ ಕಲಿಕೆಯಲ್ಲಾದ ಬದಲಾವಣೆಗಳನ್ನು ಮಾನದಂಡವಾಗಿ ಪರಿಗಣಿಸಲಾಯಿತು. ಇದಕ್ಕಾಗಿ ಕೆಲವು ಕಿರು ಪರೀಕ್ಷೆಗಳನ್ನು ನಡೆಸಲಾಯಿತು. ಈ ಹಂತದಲ್ಲಿ ಪ್ರಮುಖವಾಗಿ ಭಾಷಾ ಕೌಶಲಗಳಾದ ಮಾತುಗಾರಿಕೆ, ಬರವಣಿಗೆ ಮತ್ತು ಓದುಗಾರಿಕೆಯ ಮೇಲೆ ಹೆಚ್ಚು ಬೆಳಕು ಚೆಲ್ಲಲು ಪ್ರಯತ್ನಿಸಲಾಯಿತು.

**ವಿಧಾನ:-**



ಪ್ರಮುಖವಾಗಿ ಈ ಕಾರ್ಯವನ್ನು ಮಾಡಲು ವಿವರಣಾತ್ಮಕ ಅವಲೋಕನಾ ವಿಧಾನವನ್ನು ಅಳವಡಿಸಿಕೊಳ್ಳಲಾಯಿತು. ಇದರ ಮೂಲಕ ಈ ಕೆಳಗಿನಂತೆ ಗುಂಪು ಮತ್ತು ಜೋಡಿ ಕಾರ್ಯಗಳು ಹೇಗೆ ಭಾಷಾ ಕಲಿಕಾ ಮಟ್ಟವನ್ನು ಸುಧಾರಿಸುತ್ತವೆ ಎಂದು ತಿಳಿಯಲಾಯಿತು.

- ಗುಂಪು ಮತ್ತು ಜೋಡಿ ಕೆಲಸಗಳನ್ನು ನೀಡಿ ಅವಲೋಕನದ ಮೂಲಕ ಅನುಭವಗಳನ್ನು ಹಂಚಿಕೊಳ್ಳುವುದು.
- ಕಲಿಕಾ ವಿಧಾನ ಮತ್ತು ಚಟುವಟಿಕೆಗಳನ್ನು ರೂಪಿಸುವ ಮೂಲಕ ಮಕ್ಕಳ ಕಲಿಕಾ ಮಟ್ಟದಲ್ಲಿ ಹೇಗೆ ಸುಧಾರಣೆ ತರಬಹುದು ಎಂದು ಅರ್ಥೈಸುವುದು.
- ಕಲಿಕೆಯಲ್ಲಿ ತೊಡಗಿದ ಮಕ್ಕಳ ಕಲಿಕಾ ವಿಧಾನದಲ್ಲಾದ ಬದಲಾವಣೆಗಳನ್ನು ವಿವರಿಸುವುದು.
- ತರಗತಿಯಲ್ಲಿ ಮಾಡಲಾದ ಮೌಲ್ಯ ಮಾಪನಗಳು ಮತ್ತು ಫಲಿತಾಂಶದ ಕುರಿತು ವಿವರಿಸುವುದು.

**ಅಧ್ಯಯನದ ಫಲಿತಗಳು**

ಗುಂಪು ಮತ್ತು ಜೋಡಿ ಕಾರ್ಯದ ಮೂಲಕ ಮಕ್ಕಳ ಭಾಷಾ ಕೌಶಲಗಳ ಬಳಕೆಯಲ್ಲಿ ಸುಧಾರಣೆಯಾಗುತ್ತದೆಯೇ ಎಂದು ಈ ಅಧ್ಯಯನದಲ್ಲಿ ನೋಡಲಾಯಿತು. ಇಲ್ಲಿ ಮಕ್ಕಳು ಗುಂಪು ಕಾರ್ಯ ನೀಡಿದಾಗ

ಪ್ರಾರಂಭದಲ್ಲಿ ಗುಂಪಿನ ಒಬ್ಬ ಸದಸ್ಯರ ಮೇಲೆ ಅವಲಂಬಿತರಾಗಿದ್ದರು ಅಂದರೆ ಗುಂಪಿನ ನಾಯಕತ್ವ ವಹಿಸಿದವರು ಏನು ಹೇಳುತ್ತಾರೋ ಅದೇ ಅಂತಿಮ ತೀರ್ಮಾನವಾಗುತ್ತಿತ್ತು. ಉದಾಹರಣೆಗೆ ಬರವಣಿಗೆಯ ಸಂದರ್ಭದಲ್ಲಿ 'ನಾವು ಅಸ್ಪೃಶ್ಯತೆಯನ್ನು ಹೋಗಲಾಡಿಸಬೇಕು' ಎಂಬುದರ ಬದಲಾಗಿ 'ನವು ಅಸ್ಪರಶತೆ ಹೋಗಲಡಿಸಬೇಕು' ಎಂದು ಬರೆಯುವುದು ಸರಿ ಎಂದು ಹೇಳಿದರೆ ಎಲ್ಲರೂ ಒಪ್ಪುತ್ತಿದ್ದರು, ಅದೇ ರೀತಿ ತಂಡದ ನಾಯಕ ಅಸ್ಪೃಶ್ಯತೆಯ ವಿರುಧ್ಧವಾಗಿ ವಾದ ಮಂಡಿಸಿದರೆ ಅದನ್ನು ನೇರವಾಗಿ ಸಕಾರಣ ಕೇಳದೆ ಒಪ್ಪಿಕೊಳ್ಳುತ್ತಿದ್ದರು. ಆದರೆ ತದನಂತರದಲ್ಲಿ ಗುಂಪಿಗೆ ತಮ್ಮ ಅಭಿಪ್ರಾಯಗಳನ್ನು ತಿಳಿಸಲು ಪ್ರಾರಂಭಿಸಿದರು. ಈ ಸಂದರ್ಭದಲ್ಲಿ ಮಕ್ಕಳಿಗೆ ಇಡೀ ತಂಡವು ಒಬ್ಬರ ಅಭಿಪ್ರಾಯ ಒಪ್ಪುವುದು ಮುಖ್ಯವಲ್ಲ ಇಡೀ ತಂಡದ ನಿರ್ಧಾರ ಪ್ರಕಟಿಸುವುದು ಮುಖ್ಯ ಎಂದು ಮನವರಿಕೆ ಮಾಡಿಕೊಡಲಾಯಿತು. ಇಲ್ಲಿ ಒಂದು ವಿಷಯದ ಕುರಿತು ಚರ್ಚಿಸುವಾಗ ಸಮಾನತೆ ಎಂಬುದು ಅಗತ್ಯವಿಲ್ಲ ಬದಲಾಗಿ ಶ್ರೇಣೀಕೃತ ವ್ಯವಸ್ಥೆಯೇ ಸರಿ ಎಂದು ಒಂದು ಮಗು ವಿವರಿಸಿತು. ಆ ಗುಂಪಿನ ಉಳಿದವರು ಸಮಾಜದ ಪ್ರಗತಿಗೆ ಸಮಾನತೆ ಅಗತ್ಯ ಎಂದು ಹೇಳಿದರು. ಇಲ್ಲಿ ತಂಡವು ಸಮಾನತೆಯ ಪರವಾಗಿ ನಿರ್ಧಾರ ತೆಗೆದುಕೊಂಡಿತ್ತಾದರೂ ಆ ಒಂದು ಮಗುವಿನ ವಿಷಯ ಮಂಡನೆಗೂ ಸಮಾನ ಗೌರವ ದೊರಕಿತು. ಈ ಅವಧಿಯಲ್ಲಿ ಭಾಷಾ ಕೌಶಲಗಳ ಬಳಕೆಯಲ್ಲಿ ಗಮನಾರ್ಹ ಸುಧಾರಣೆ ಕಾಣದಿದ್ದರೂ ತಕ್ಕ ಮಟ್ಟಿಗೆ ಬದಲಾವಣೆಗಳನ್ನು ಕಾಣಲು ಸಾಧ್ಯವಾಯಿತು. ಇಲ್ಲಿ ಮಕ್ಕಳು ಗುಂಪಿನ ಸದಸ್ಯರ ಅಭಿಪ್ರಾಯಗಳಿಗೆ ಮನ್ನಣೆ ನೀಡಲು ಪ್ರಾರಂಭಿಸಿದರು. ತಮ್ಮ ಅಭಿಪ್ರಾಯಗಳನ್ನು ಹೇಳಲು, ಬೇರೆಯವರು ನೀಡಿದ ಅಭಿಪ್ರಾಯಗಳಿಗೆ ಪ್ರತಿಕ್ರಿಯೆಗಳನ್ನು ನೀಡಲು ಪ್ರಾರಂಭಿಸಿದರು.

ಹೀಗೆ ಪರಸ್ಪರರ ಸಹಾಯದಿಂದ ಓದಿ ಅರ್ಥ ಮಾಡಿಕೊಳ್ಳಲು ಪ್ರಯತ್ನಿಸಿದರು. ತಾವು ಬರೆದುದನ್ನು ಗುಂಪು ಮತ್ತು ಜೋಡಿಗಳಲ್ಲಿ ಪರಸ್ಪರ ಪರಿಶೀಲಿಸಿ ಸಲಹೆಗಳನ್ನು ನೀಡಲು ಪ್ರಾರಂಭಿಸಿದರು. ಆದರೆ ಇದರಲ್ಲಿ ಇನ್ನೂ ಸುಧಾರಣೆಯ ಅಗತ್ಯವಿದೆ.  ಮಗುವಿನ ಮೌಲ್ಯಮಾಪನ ಮಾಡಿ ಸೂಕ್ತ ಸಲಹೆಗಳನ್ನು ನೀಡುವಾಗ ಶಿಕ್ಷಕರಿಗೆ ಗುಂಪಿನವರೇ ಸಹಾಯ ಮಾಡಿದರು. ಏಕೆಂದರೆ ಅವರಿಗೆ ತಾವು ಎಲ್ಲಿ ತಪ್ಪು ಮಾಡುತ್ತಿದ್ದೇವೆ ಮತ್ತು ಎಲ್ಲಿ ಗೊಂದಲವಿದೆ ಎಂದು ತಿಳಿಯುತ್ತಿದ್ದುದರಿಂದ ಅಲ್ಲದೇ ಗುಂಪಿನಲ್ಲಿ ಕಾರ್ಯನಿರ್ವಹಿಸುವಾಗ ಇದೇ ರೀತಿಯ ಸಲಹೆಗಳನ್ನು ಪಡೆಯುತ್ತಿದ್ದುದರಿಂದ ಬೇಗ ಮನವರಿಕೆಯಾಗುತ್ತಿತ್ತು.

ಮಕ್ಕಳು ಪರಸ್ಪರ ಸಹಾಯ ಮತ್ತು ಸಹಕಾರದಿಂದ ಕಲಿಯಲು ಪ್ರಾರಂಭಿಸಿದರು. ಇದರಿಂದ ಅವರು ನೀಡುವ ಸಲಹೆಗಳನ್ನು ಧನಾತ್ಮಕವಾಗಿ ತೆಗೆದುಕೊಂಡು ಸುಧಾರಣೆ ಮಾಡಿಕೊಳ್ಳಲು ಪ್ರಯತ್ನಿಸಿದರು. ಆದರೆ ಇದರಿಂದ ಅವರ ಕಲಿಕಾ ಮಟ್ಟದಲ್ಲಿ ಸುಧಾರಣೆಯಾಯಿತಾದರೂ ಸಹ ಇನ್ನೂ ಹೆಚ್ಚಿನ ಅಭ್ಯಾಸದ ಅಗತ್ಯವಿದೆ.É ಇಲ್ಲಿ ಕೆಲವು ಮಕ್ಕಳು ವೈಯಕ್ತಿಕವಾಗಿ ಕಾರ್ಯನಿರ್ವಹಿಸುವಾಗ ಮತ್ತು ಬರೆಯುವಾಗ ತಮ್ಮ ಸಹಪಾಠಿಗಳು ನೀಡಿದ ಸಲಹೆಗಳನ್ನು ಸ್ವೀಕರಿಸದೆ ಶಿಕ್ಷಕರು ಹೇಳುವವರೆಗೂ ಕಾಯುತ್ತಿದ್ದರು; ಆದರೆ ಗುಂಪಿನಲ್ಲಿ ಕಾರ್ಯನಿರ್ವಹಿಸುವಾಗ ಸಕ್ರಿಯವಾಗಿ ಪಾಲ್ಗೊಳ್ಳುತ್ತಿದ್ದರು. ಗುಂಪಿನ ನಿಯಮಗಳನ್ನು ಪಾಲಿಸುತ್ತಿದ್ದರು. ಗುಂಪಿನ ಪ್ರಸ್ತುತೀಕರಣದಲ್ಲಿ, ನಾಟಕ ಅಭಿನಯದ ಸಂದರ್ಭದಲ್ಲಿ, ಸಂಭಾಷಣೆ ರಚಿಸುವಾಗ, ವಿಷಯವನ್ನು ಅರ್ಥಮಾಡಿಕೊಂಡು ಪ್ರಸ್ತುತಪಡಿಸುವಾಗ ಪರಸ್ಪರ ಸಹಕರಿಸುತ್ತಾ ಗುಂಪಿನ ಯಶಸ್ಸಿಗೆ ಪ್ರಯತ್ನಿಸುತ್ತಿದ್ದರು.

ಗುಂಪು ಮತ್ತು ಜೋಡಿ ಕಾರ್ಯದ ಮೂಲಕ ಮಕ್ಕಳು ಕಲಿಕೆಯಲ್ಲಿ ಸಕ್ರಿಯವಾಗಿ ತೊಡಗಿದರು. ಪ್ರತಿ ಚಟುವಟಿಕೆಯಲ್ಲಿ ಭಾಗವಹಿಸುವ ಮೂಲಕ ಗುಂಪಿನ ಯಶಸ್ಸಿಗೆ ಪ್ರಯತ್ನಿಸುತ್ತಿದ್ದರು.

ವ್ಯವಸ್ಥಿತವಾಗಿ ಗುಂಪು ಮತ್ತು ಜೋಡಿ ಕಾರ್ಯವನ್ನು ಪ್ರಭಾವಶಾಲಿಯಾಗಿ ಭಾಷಾ ಕಲಿಕೆಯಲ್ಲಿ ಹೇಗೆ ಬಳಸಬಹುದು?

- ಗುಂಪಿಗೆ ನೀಡುವ ಚಟುವಟಿಕೆಗಳು ಪರಸ್ಪರ ಗುಂಪಿನಲ್ಲಿ ಜವಾಬ್ದಾರಿಯನ್ನು ಹಂಚಿಕೊಂಡು ಕೆಲಸ ಮಾಡಲು ಪೂರಕವಾಗಿರಬೇಕು.

- ಗುಂಪು ಚಟುವಟಿಕೆಯನ್ನು ನೀಡುವ ಮೊದಲು ಚಟುವಟಿಕೆಯ ಕುರಿತು, ಅಪೇಕ್ಷಿತ ನಿರೀಕ್ಷೆಗಳ ಕುರಿತು, ಗುಂಪಿನಲ್ಲಿ ಹೇಗೆ ಕಾರ್ಯನಿರ್ವಹಿಸಬೇಕು, ಗುಂಪಿನ ಹೊಂದಾಣಿಕೆಯ ಅಗತ್ಯತೆ ಕುರಿತು ಸಂಪೂರ್ಣ ವಿವರಣೆ ನೀಡಬೇಕು.

- ಪ್ರತಿ ಮಗು ಮತ್ತು ಗುಂಪಿನಿಂದ ಶಿಕ್ಷಕರು ಬಯಸುವ ನಿರೀಕ್ಷೆಗಳನ್ನು ಮತ್ತು ಸಮಯವನ್ನು ಸ್ಪಷ್ಟಪಡಿಸಬೇಕು ಇದರಿಂದ ಅವರು ತ್ವರಿತವಾಗಿ ಗುಂಪಿನಲ್ಲಿ ಕಾರ್ಯನಿರ್ವಹಿಸಲು ಸಹಾಯವಾಗುತ್ತದೆ ಮತ್ತು ಮುಂದೆ ಅವರು ನಿರೀಕ್ಷಿತ ಗುರಿಯತ್ತ ಕಾರ್ಯನಿರ್ವಹಿಸಲು ಸಹಾಯವಾಗುತ್ತದೆ.

- ಶಿಕ್ಷಕರು ಸುಗಮಕಾರರಾಗಿ ಕಾರ್ಯನಿರ್ವಹಿಸಿ ಇಡೀ ಗುಂಪು ಜವಾಬ್ದಾರಿಯುತವಾಗಿ ಕಾರ್ಯನಿರ್ವಹಿಸಲು ಪ್ರೋತ್ಸಾಹಿಸಬೇಕು.

- ಮಕ್ಕಳ ವೈಯುಕ್ತಿಕ ಭಿನ್ನತೆಗನುಸಾರ ಹೆಚ್ಚಿನ ಚಟುವಟಿಕೆಗಳನ್ನು ರೂಪಿಸಿರಬೇಕು. ಉದಾಹರಣೆಗೆ ಒಂದು ಪದ್ಯವನ್ನು ನೀಡಿ ಗುಂಪಿನಲ್ಲಿ ಓದಿ ಅರ್ಥಮಾಡಿಕೊಂಡು ವಿವರಿಸಲು ನೀಡಿದ ಚಟುವಟಿಕೆಯನ್ನು ಒಂದು ಗುಂಪು ಬೇಗ ಮುಗಿಸಿದರೆ ಅವರಿಗೆ ಹೆಚ್ಚಿನ ಕಾರ್ಯವಾಗಿ ಪದ್ಯದಲ್ಲಿ ಬರುವ ವಿಷಯವನ್ನು ಆಧರಿಸಿ ತಮ್ಮದೇ ಆದ ರೀತಿಯಲ್ಲಿ ಪದ್ಯರಚನೆ ಮಾಡಲು ಅವಕಾಶ ಕಲ್ಪಿಸುವುದು.

- ಮಕ್ಕಳು ತಮ್ಮ ಕಾರ್ಯವನ್ನು ಮಾಡಿ ಮಂಡಿಸಿದ ನಂತರ ಅವರ ಕಾರ್ಯದ ಕುರಿತು ಸ್ವತಃ ಮೌಲ್ಯಮಾಪನ ಮಾಡಿಕೊಂಡು ಹಿಮ್ಮಾಹಿತಿ ನೀಡಲು ಅವಕಾಶ ನೀಡಬೇಕು. ಇದು ತಮ್ಮ ಗುಂಪಿನ ಸದಸ್ಯರು ಮತ್ತು ಬೇರೆ ಗುಂಪಿನ ಸದಸ್ಯರ ಸಹಾಯದಿಂದ ನಡೆಯಬೇಕು.

ಗುಂಪು ಮತ್ತು ಜೋಡಿ ಕಾರ್ಯದ ಲಾಭಗಳು:-

- ಜೋಡಿ ಮತ್ತು ಗುಂಪು ಚಟುವಟಿಕೆಗಳ ಮೂಲಕ ಮಕ್ಕಳಿಗೆ ಹೆಚ್ಚು ಕೇಳಿಸಿಕೊಳ್ಳಲು, ಮಾತನಾಡಲು ಮತ್ತು ಓದಲು ಅವಕಾಶ ದೊರೆಯುತ್ತದೆ.

- ಗುಂಪು ಚಟುವಟಿಕೆಯು ಚರ್ಚೆ, ಆಟ, ನಾಟಕ, ಸಂಭಾಷಣೆಯ ರಚನೆ, ಭಿತ್ತಿಪತ್ರಗಳ ರಚನೆ, ಪಾತ್ರಗಳ ನಡುವಿನ ಸಂಬಂಧ ಗುರುತಿಸುವಿಕೆ, ಇತ್ಯಾದಿಗಳಲ್ಲಿ ಪ್ರಮುಖ ಪಾತ್ರವಹಿಸುತ್ತದೆ. ಮತ್ತು ಸಾಮಾಜಿಕ ಕಲಿಕೆಯ ಅವಕಾಶ ನೀಡುತ್ತದೆ.

- ಸ್ವಂತ ಮತ್ತು ಸ್ನೇಹಿತರ ಸಹಾಯದಿಂದ ತಮ್ಮ ತಪ್ಪುಗಳನ್ನು ಹಾಗೂ ಗೊಂದಲಗಳನ್ನು ಸರಿಮಾಡಿಕೊಳ್ಳಲು ಸಹಕಾರಿಯಾಗಿದೆ. ಶಿಕ್ಷಕರ ಲಭ್ಯತೆಯನ್ನು ಹೆಚ್ಚು ನಿರೀಕ್ಷಿಸುವುದಿಲ್ಲ. ಸಹಕಾರದೊಂದಿಗೆ ಮತ್ತು ತಂಡಸ್ಫೂರ್ತಿಯೊಂದಿಗೆ ನೀಡಿದ ಕಾರ್ಯವನ್ನು ಯಶಸ್ವಿಯಾಗಿ ಮುಗಿಸುವ ಗುಣ ಬೆಳೆಸುತ್ತದೆ.

- ಗುಂಪುಗಳನ್ನು ಆಗಾಗ ಬದಲಾಯಿಸುವುದರಿಂದ ಮಕ್ಕಳಲ್ಲಿ ಸ್ನೇಹ, ಸಹಕಾರ ಮತ್ತು ಗೌರವಗಳನ್ನು ಬೆಳೆಸಬಹುದು. ಇದರಿಂದ ಪರೋಕ್ಷವಾಗಿ ಮಕ್ಕಳ ಕಲಿಕೆಯಲ್ಲಿ ಸುಧಾರಣೆ ಕಂಡುಬರುತ್ತದೆ.

- ತರಗತಿಯಲ್ಲಿ ಶಿಕ್ಷಕರ ಮತ್ತು ಮಕ್ಕಳ ನಡುವಿನ ಸಂಭಾಷಣೆಯು ಸಾಮಾಜಿಕ ಒಡನಾಟದ ರೀತಿಯಲ್ಲಿ ನಡೆಯುತ್ತದೆ.

- ಶಿಕ್ಷಕರಿಗೆ ಗುಂಪು ಕಾರ್ಯವು ಒಂದು ಅತ್ಯುತ್ತಮ ಅಳತೆಮಾಪಕÀವಾಗಿದೆ; ಇದರಿಂದ ಮಕ್ಕಳ ನಡುವೆ ಉತ್ತಮ ಒಡನಾಟವನ್ನು ಬೆಳೆಸಬಹುದು ಮತ್ತು ಮಕ್ಕಳ ವೈಯುಕ್ತಿಕ ಕಾರ್ಯಕ್ಕೆ ಉತ್ತೇಜನ ನೀಡಬಹುದು. ಮಕ್ಕಳ ನಡುವಿನ ಬುಧ್ಧಿಮತ್ತೆ ಮತ್ತು ಜ್ಞಾನವನ್ನು ಪರಸ್ಪರ ವರ್ಗಾಯಿಸಬಹುದು.

ಗುಂಪು ಮತ್ತು ಜೋಡಿ ಕಾರ್ಯವನ್ನು ತರಗತಿಯಲ್ಲಿ ಅಳವಡಿಸಿಕೊಳ್ಳಲು ಇರುವ ಅಡೆತಡೆಗಳು:-

- ಮಕ್ಕಳ ಮಟ್ಟಕ್ಕನುಸಾರ ಗುಂಪು ಮಾಡಿ ಚಟುವಟಿಕೆ ರೂಪಿಸುವುದು ಕಷ್ಟ.
- ಶಿಕ್ಷಕರು ಸರಿಯಾದ ಮಾರ್ಗದರ್ಶನ ನೀಡದಿದ್ದರೆ ಕೇವಲ ಕೆಲವೇ ಮಕ್ಕಳು ಸಂಪೂರ್ಣ ಚಟುವಟಿಕೆಯಲ್ಲಿ ಭಾಗವಹಿಸಿ ಉಳಿದ ಮಕ್ಕಳು ಮೂಲೆಗುಂಪಾಗುವ ಸಾಧ್ಯತೆ ಇರುತ್ತದೆ.
- ತರಗತಿಯಲ್ಲಿ ಸಂಪೂರ್ಣ ಶಿಕ್ಷಕರ ಸಹಾಯವನ್ನು (ವೈಯುಕ್ತಿಕ ಗಮನ) ಬಯಸುವ ಮಕ್ಕಳ ಕಲಿಕೆ ಉತ್ತಮಗೊಳಿಸಲು ಮತ್ತು ಸುಧಾರಣೆ ತರಲು ವೈಯುಕ್ತಿಕ ಗಮನ ನೀಡಲು ಕಷ್ಟ.
- ಸರಿಯಾದ ತರಗತಿ ನಿರ್ವಹಣೆ ಇಲ್ಲದಿದ್ದರೆ ಮಕ್ಕಳಲ್ಲಿ ಗುಂಪುಗಾರಿಕೆ ಉಂಟಾಗಬಹುದು.

ಉಪಸಂಹಾರ :-

ಒಟ್ಟಾರೆಯಾಗಿ ಈ ವಿಷಯದ ಮೂಲಕ ನನ್ನ ಅನುಭವದ ಸಾರದೊಂದಿಗೆ ತರಗತಿ ಗುಂಪುಗಳನ್ನು ಮಾಡುವುದು ಮತ್ತು ನಿರ್ವಹಿಸುವುದು ಹಾಗೂಅದರೊಟ್ಟಿಗೆ ಮಕ್ಕಳ ಕಲಿಕಾ ಮಟ್ಟದ ಸುಧಾರಣೆ ಹೇಗೆ ಮಾಡುವುದು ಎಂಬುದರ ಕುರಿತು ಹಂಚಿಕೊಳ್ಳಲು ಪ್ರಯತ್ನಿಸಲಾಗಿದೆ. ಜೋಡಿ ಮತ್ತು ಗುಂಪು ಕಾರ್ಯಗಳ ಸಾಧಕ ಬಾಧಕಗಳ À ಬಗ್ಗೆ ಚರ್ಚಿಸಲಾಗಿದೆ. ಜೋಡಿ ಮತ್ತು ಗುಂಪುಕಾರ್ಯಗಳು ಮಕ್ಕಳಲ್ಲಿರುವ ಭಾಷಾ ಕೌಶಲಗಳ ಬೆಳವಣಿಗೆ ಹೇಗೆ ಸಹಾಯಕವಾಗಿದೆ ಎಂಬುದನ್ನು ಚರ್ಚಿಸಲು ಪ್ರಯತ್ನಿಸಲಾಗಿದೆ.

ಆಧಾರಗಳು:-


- TESS India (Teacher Education through School based Support) mÉ¸ï EArAiÀiÁzÀ ºÀ¸ÀÛ¥Àæw LL13_Pair_work_for_language_and_literacy
- ಅಂತರ್ಜಾಲ ಲೇಖನಗಳು

- 8 Solid Teaching Tips for Effective Pair and Group Work in English Classes
- The Perfect Balance Between Pair Work And Group Work
- Besides pair work and group work, students can also complete activities individually and as a class.
- Advantages And Disadvantages Of Pair And Group Work
- Implementing Group Work in the Classroom